**ಓ.ಎಸ್. ನಂಬರಃ 44/2023**

**ಪಿ. ಡಬ್ಲ್ಯೂಃ 2**

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 17-09-2025)

**1ನೇ ಪ್ರತಿವಾದಿ ಪರ ಶ್ರೀ ಯು.ಹೆಚ್.ಎನ್. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಪಾಟೀ ಸವಾಲುಃ 2 ಮತ್ತು 3ನೇ ಪ್ರತಿವಾದಿಗಳ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

ವಾದಿ ನನ್ನ ದೊಡ್ಡ ಭಾವನ ಮಗಳು. ನನಗೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ವಾದಿ ಹೇಳಿರುತ್ತಾರೆ. ವಾದಿ ಏನು ಸಾಕ್ಷಿ ಹೇಳಬೇಕೆಂದು ಹೇಳಿರುತ್ತಾರೆಯೇ ಎಂದರೆ, ಸಾಕ್ಷಿಯು ವಾದಿಯು ತನ್ನ ತಾಯಿ ಆಸ್ತಿಯನ್ನು 3ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಹೇಳಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಓದಿ ನೋಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಅದರ ಸರ್ವೆ ನಂಬರ್ ಯಾವುದು, ಅದರ ಕ್ಷೇತ್ರ ಎಷ್ಟು ಮತ್ತು ಗಡಿಗಳು ಏನು ಎಂಬುದರ ಬಗ್ಗೆ ಹೇಳಬಹುದಾ ಎಂದರೆ, ಸಾಕ್ಷಿಯು ಒಟ್ಟು 15 ಅಥವಾ 17 ಸರ್ವೆ ನಂಬರುಗಳು ಇರಬಹುದು ಎಂದು ಉತ್ತರಿಸಿರುತ್ತಾರೆ. ಸದ್ರಿ 15 ಅಥವಾ 17 ಸರ್ವೆ ನಂಬರುಗಳು ಯಾವ ಯಾವುದು ಎಂದು ನನಗೆ ಗೊತ್ತಿಲ್ಲ. ಸದ್ರಿ ಸರ್ವೆ ನಂಬರ್ ಗಳ ದಾಹಲೆ ಪತ್ರಗಳನ್ನು ನಾನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವಂತಹ ದಾವಾ 'ಅ' ಮತ್ತು 'ಬ' ಪರಿಶಿಷ್ಟದ ಆಸ್ತಿಗಳು ಯಾವುದು ಎಂದು ನನಗೆ ಗೊತ್ತಿಲ್ಲ. ದಾವಾ 'ಅ' ಮತ್ತು 'ಬ' ಪರಿಶಿಷ್ಟದ ಆಸ್ತಿಗಳ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ವಾದಿ ಬರೆಯಲು ಹೇಳಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳನ್ನು ವಾದಿ ಹೇಳಿ ಬರೆಸಿರುತ್ತೇನೆ ಎಂದರೆ ಹೌದು.

2. 2ನೇ ಪ್ರತಿವಾದಿಗೆ ಓದು, ಬರಹ ಬರುವುದಿಲ್ಲ. 2ನೇ ಪ್ರತಿವಾದಿಯು ಬ್ಯಾಂಕ್ ಅಥವಾ ಇತರ ಕಛೇರಿಗಳಿಗೆ ಹೋಗುತ್ತಾರೆಯೇ ಎಂದರೆ, ಸಾಕ್ಷಿಯು ಬೇರೆಯವರು ಕರೆದುಕೊಂಡು ಹೋದರೆ ಹೋಗುತ್ತಾಳೆ ಎಂದು ಉತ್ತರಿಸಿರುತ್ತಾರೆ. 2ನೇ ಪ್ರತಿವಾದಿಯವರಿಗೆ ಸಾಮಾನ್ಯ ಬುದ್ಧಿಶಕ್ತಿ ಇರುತ್ತದೆಯಾ ಎಂದರೆ ಹೌದು. ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ತಾಯಿಯನ್ನು ನಾನು ನೋಡಿರುತ್ತೇನೆ. ನಾನು ವಾದಿಯ ತಾಯಿಯನ್ನು ಅವರು ಮರಣ ಹೊಂದುವ ಪೂರ್ವದಲ್ಲಿ ಸುಮಾರು 30-40 ವರ್ಷಗಳಿಂದ ನೋಡಿರುತ್ತೇನೆ. ವಾದಿಯ ತಾಯಿ ವಾದಿಯ ತಂದೆ ಮರಣ ಹೊಂದಿದ ನಂತರ ಅವರ ಆಸ್ತಿಗಳನ್ನು ಅವರೇ ಆಳು ಇಟ್ಟು ಬೇಸಾಯವನ್ನು 4 ವರ್ಷಗಳವರೆಗೆ ಮಾಡಿರುತ್ತಾರೆ. ವಾದಿ, 1 ಮತ್ತು 3 ನೇ ಪ್ರತಿವಾದಿಗಳ ಮದುವೆಯನ್ನು ಅವರ ತಾಯಿ ಮಾಡಿಸಿರುತ್ತಾರೆ. ವಾದಿಯ ತಾಯಿಗೆ ವ್ಯವಹಾರ ಜ್ಞಾನ ಇತ್ತು. ವಾದಿಯ ತಾಯಿ ಮರಣ ಹೊಂದುವ ಒಂದು ವರ್ಷಗಳ ಮೊದಲು ಸ್ವಲ್ಪ ವ್ಯವಹಾರಗಳನ್ನು ಕಡಿಮೆ ಮಾಡಿದ್ದರು. ಅದಕ್ಕಿಂತ ಪೂರ್ವದಲ್ಲಿ ವಾದಿಯ ತಾಯಿ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ಹೌದು. ವಾದಿಯ ತಾಯಿ ಮರಣ ಹೊಂದುವವರೆಗೆ ಅವರ ಬುದ್ಧಿಶಕ್ತಿ ಚೆನ್ನಾಗಿಯೇ ಇತ್ತು ಎಂದರೆ, ಸಾಕ್ಷಿಯು ಹೌದು, ಅವರಿಗೆ 60 ವರ್ಷ ವಯಸ್ಸಿನ ನಂತರ ಸ್ವಲ್ಪ ಬೇರೆಯವರ ಸಹಾಯ ಪಡೆಯುತ್ತಿದ್ದರು ಎಂದು ಉತ್ತರಿಸಿರುತ್ತಾರೆ.

3. ವಾದಿಯ ತಾಯಿ ಮತ್ತು 2 ನೇ ಪ್ರತಿವಾದಿಯವರು 3ನೇ ಪ್ರತಿವಾದಿಗೆ ಏನು ದಾಖಲೆ ಬರೆದುಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಸದ್ರಿ ದಾಖಲೆಯ ಬಗ್ಗೆ ನನಗೆ ಇಲ್ಲಿಯವರೆಗೆ ಹೇಳಿರುವುದಿಲ್ಲ. ಸದ್ರಿ ದಾಖಲೆಯ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ, ಸಾಕ್ಷಿಯು ನನಗೆ ಗೊತ್ತಿರುವ ವಿಚಾರವನ್ನು ಬರೆಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ವಾದಿಯು ಈ ದಾವೆಯನ್ನು ಪಾಲಿಗಾಗಿ ದಾಖಲಿಸಿರುತ್ತಾರೆ. ವಾದಿ ವಾದ ಪತ್ರದಲ್ಲಿ 2ನೇ ಪ್ರತಿವಾದಿ ಮತ್ತು ವಾದಿಯ ತಾಯಿ 3ನೇ ಪ್ರತಿವಾದಿಗೆ ದಾಖಲೆ ಬರೆದುಕೊಟ್ಟ ಬಗ್ಗೆ ಕಾಣಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ನಡುವೆ ಅವರ ತಾಯಿ ಜೀವಂತ ಇರುವಾಗ ಅವರ ನಡುವೆ ಪಂಚಾಯತಿಕೆ ಆದ ಬಗ್ಗೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ಮತ್ತು ವಾದಿಯ ತಾಯಿ ತಮ್ಮ ಹಕ್ಕನ್ನು 3ನೇ ಪ್ರತಿವಾದಿಗೆ ಬಿಟ್ಟುಕೊಟ್ಟು ದಾಖಲೆ ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಮೇಲೆ ಹೇಳಿದಂತೆ 15 ರಿಂದ 17 ಸರ್ವೆ ನಂ. ಗಳಲ್ಲಿರುವ ಆಸ್ತಿಗಳನ್ನು ಯಾರು ಬೇಸಾಯ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಈ ವಿಷಯವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ.

4. ವಾದಿಯವರು ತನ್ನ ಗಂಡನ ಮನೆಯಲ್ಲಿರುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿ ಅವರ ತಾಯಿ ಕಟ್ಟಿಕೊಟ್ಟ ಸಣ್ಣ ಬಿಡಾರದಲ್ಲಿ ವಾಸವಾಗಿರುತ್ತಾರೆ. 2ನೇ ಪ್ರತಿವಾದಿ ಮತ್ತು ಅವರ ತಾಯಿ ಒಟ್ಟಾಗಿ ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಹೌದು. 2 ನೇ ಪ್ರತಿವಾದಿ ಮತ್ತು ಅವರ ತಾಯಿಯನ್ನು 3ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ, ಸಾಕ್ಷಿಯು ಎಲ್ಲರೂ ಹೋಗುತ್ತಿದ್ದರು, ಯಾರು ಯಾರು ಏನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸುವಾಗ ವಾದಿಯ ತಾಯಿಯನ್ನು ಮತ್ತು 2ನೇ ಪ್ರತಿವಾದಿಯನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದು ನಾನು ಬರೆಸಿರುವುದಿಲ್ಲ. 2ನೇ ಪ್ರತಿವಾದಿ ಮತ್ತು ಅವರ ತಾಯಿಯನ್ನು 3ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರಿಂದ, 2 ನೇ ಪ್ರತಿವಾದಿ ಮತ್ತು ಅವರ ತಾಯಿ ಸ್ವ-ಖುಷಿಯಿಂದ ದಾವಾ ಆಸ್ತಿಯಲ್ಲಿರುವ ಅವರ ಹಕ್ಕನ್ನು 3ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ, ಸಾಕ್ಷಿಯು ಯಾರು ಯಾರು ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಗಳ ಬಗ್ಗೆ ಮತ್ತು ವಾದಿ, ಪ್ರತಿವಾದಿಗಳ ಕುಟುಂಬದ ವಸ್ತು ಸ್ಥಿತಿಯ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಸಹ, ವಾದಿ ನನ್ನ ಸಂಬಂಧಿಕಳಾಗಿರುವುದರಿಂದ ಆಕೆಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**